





## ಗೂಬೆ ಬಂದಿತ್ತಾ ತಂಗಿ...!

ಕಾಡಿನಂಚಿನ ನಮ್ಮ ನೆರೆಮನೆಗೆ ದಿನಾಲೂ ಒಂದು ಗೂಬೆ ಬಂದು ಕುಳಿತಿರುತ್ತದೆ. ಅದರ ಫೋಟೊ ತೆಗೆಯುವ ಕುತೂಹಲ ನನಗೆ. ಫೋಟೊ ತೆಗೆಯಲು ಮುಂದಾದರೆ ಅದು ಹಾರಿ ಹೋಗುತ್ತಿತ್ತು. ಗೂಬೆ ಮನೆಗೆ ಬಂದರೆ ಕೆಟ್ಟದ್ದು ಆಗುತ್ತದೆ ಎಂಬ ನಂಬಿಕೆ ಇದೆ. ಆದರೂ ನಾನು ಅದನ್ನು ಅಪರೂಪದ ಅತಿಥಿ ಎಂದು ಭಾವಿಸುತ್ತಿದ್ದೆ. ಒಮ್ಮೆ ಈ ಗೂಬೆ ಮನೆಯ ಹಿಂಬದಿ ಬಟ್ಟೆ ಹಾಕುವ ಕೋಲಿನ ಮೇಲೆ ಬಂದು ಕೂತು ಏನನ್ನೋ ಧ್ಯಾನಿಸುತ್ತಿತ್ತು. ದೂರದಿಂದಲೇ ಫೋಕಸ್ ಮಾಡಿ ಫೋಟೊ ತೆಗೆದೆ. ಇನ್ನೂ ಹತ್ತಿರದಿಂದ ಹಾಗೂ ಕ್ಲೋಸ್‌ಅಪ್ ಆ್ಯಂಗಲ್‌ನಿಂದ ಫೋಟೊ ತೆಗೆಯಲು ಒಂದೊಂದೇ ಹೆಜ್ಜೆ ಮುಂದಿಟ್ಟೆ. ನಾನು ಸನಿಹ ಆಗುವುದನ್ನು ಗ್ರಹಿಸಿದ ಅದು ನನ್ನನ್ನೇ ದುರುಗುಟ್ಟಿ ನೋಡಿದ ಗುಮ್ಮ ಪುರ್ ಎಂದು ಹಾರಿ ಹೋಯಿತು.

–ಡಾ. ವೇಣುಗೋಪಾಲ ಶರ್ಮಾ, ಗುರುವಾಯನಕೆರೆ



## ಮಸಾಲ ಪದಾರ್ಥಗಳ ಅಲಂಕಾರ

ಮಸಾಲೆ ಪದಾರ್ಥಗಳಿಲ್ಲದೇ ಯಾವುದೇ ಅಡುಗೆಯ ಕಲ್ಪನೆ ಮಾಡುವುದೇ ಅಸಾಧ್ಯ. ಇದಕ್ಕೆ ಮನೆಯೇ ಇರುಬಹುದು ಅಥವಾ ಉಪಾಹಾರ ದರ್ಶಿನಿಗಳೇ ಇರಬಹುದು. ಆದರೆ, ಮಸಾಲೆಯ ಇದನ್ನೇ ಗ್ರಾಹಕರನ್ನು ಆಕರ್ಷಿಸಲು ಉಪಾಹಾರ ದರ್ಶಿನಿಯ ಅಲಂಕಾರ ಮಾಡಿದರೇ ಹೇಗೆ? ಇಂತಹ ಪರಿಕಲ್ಪನೆಯಲ್ಲಿ ಮಸಾಲೆ ಪದಾರ್ಥಗಳನ್ನೇ ಅಲಂಕಾರ ಮಾಡಿಕೊಂಡ ಉಪಾಹಾರ ದರ್ಶಿನಿಯೊಂದು ಬೆಂಗಳೂರಿನ ಬಸವನಗುಡಿಯಲ್ಲಿದೆ. ಬಸವನಗುಡಿಯ ಅಮೃತ ಹಸ್ತಾ ದರ್ಶಿನಿಯಲ್ಲಿ ಇಂತಹ ಅಲಂಕಾರವನ್ನು ನೋಡಬಹುದು.

–ಶ್ರೀನಿವಾಸ ಮೂರ್ತಿ ಎನ್. ಎಸ್., ಬೆಂಗಳೂರು